> ಹೋಗುವ ಮೊದಲು ದೀರ್ಘವಾಗಿ ಚುಂಬಿಸಿದ ಸೂರ್ಯ ನಿಟ್ಟುಸಿರಿಟ್ಟು, ತಲೆ ಸವರಿದ. ಏನೋ ಹೇಳಬೇಕಿತ್ತೇನೋ ಅವನಿಗೆ...

ಕರ್ಣನಂತಹ ಮಗನೊಬ್ಬನೊಂದಿಗೆ ಬದುಕಿದ್ದರೆ ಇದನ್ನೆಲ್ಲಾ ನೋಡುವ ಹಣೆಬರಹ ತಪ್ಪುತ್ತಿತ್ತು.

ಅಥವಾ ದುಡುಕದೇ ಸುಮ್ಮನೆ ಋಷಿಗಳು ನೀಡಿದ 'ವರ'ದ ಬಗ್ಗೆ ಅಮ್ಮ ಅಪ್ಪನ ಮುಂದೆ ಹೇಳಿದ್ದರೂ ಸಾಕಿತ್ತು. ಹೇಳಿದ್ದರೆ, ಅವರು ನನ್ನ ವಿವಾಹಪೂರ್ವ ಪ್ರಯೋಗವನ್ನು ಖಂಡಿತಾ ಒಪ್ಪುತ್ತಿರಲಿಲ್ಲ. ಕೊನೆಗೆ ದೂರ್ವಾಸ ಋಷಿಗಳನ್ನು ಕಾಡಿಬೇಡಿಯಾದರೂ ವರವನ್ನು ಹಿಂಪಡೆಯುವಂತೆ ಮಾಡುತ್ತಿದ್ದರು. ಆಮೇಲೆ...? ನಾನು ಪಾಂಡು ರಾಜನ ಪತ್ನಿಯಾಗಿ, 'ಬಂಜೆ' ಎಂಬ ಬಿರುದು ಹೊತ್ತು, ಸಾಯುವವರೆಗೂ ಗಾಂಧಾರಿ ಮತ್ತವಳ ಮಕ್ಕಳ ಸೇವೆ ಮಾಡಿಕೊಂಡು ಇರಬೇಕಿತ್ತೇನೋ?

ಹರೆಯ ಮೈ–ಮನಸ್ಸುಗಳನ್ನು ಆವರಿಸುತ್ತಿದ್ದ ವಯಸ್ಸಲ್ಲಿ ನಾನೇಕೆ ಆ ಸಾಹಸಕ್ಕೆ ಕೈ ಹಾಕಿದೆ? ಖಂಡಿತಾ ವಿವಾಹಕ್ಕೆ ಮುನ್ನ ಮಕ್ಕಳನ್ನು ಪಡೆಯುವುದು ತಪ್ಪೇ? ಹೌದೆನಿಸುತ್ತಿದೆ ಈಗ. ಮಗುವನ್ನು ಸಾಕಲಾರದ ಮೇಲೆ ಅದನ್ನು ಹಡೆದು ಏನುಪಯೋಗ? ಇಷ್ಟು ಬುದ್ಧಿ, ತಿಳಿವಳಿಕೆ ಆ ಹರೆಯಕ್ಕೆ ಎಲ್ಲಿರಬೇಕು? ಹೀಗೆ ಏನೊಂದೂ ಗೊತ್ತಿಲ್ಲದ್ದಕ್ಕೇ ಅಲ್ಲವೇ ಕುತೂಹಲದಿಂದ ಋಷಿಗಳು ನೀಡಿದ 'ವರ'ವನ್ನು ಪ್ರಯೋಗಿಸಲು ಹೊರಟಿದ್ದು.

ಆ ಕೋಪಿಷ್ಠ ಮುನಿಗಳು ನಾನು ಸಂತೋಷದಿಂದ ವರ್ಷಕಾಲ ಸೇವೆ ಮಾಡಿದ್ದಕ್ಕೆ ಸಂತೃಪ್ತರಾಗಿ, 'ನಿನಗೇನು ಇಷ್ಟವೆಂದು' ಕೇಳಿದ್ದರಲ್ಲವೇ. ಅವರೊಡನೆ ಸಲುಗೆ ಬೆಳೆದಿತ್ತಲ್ಲಾ, 'ನನಗೆ ಆಡುವುದೆಂದರೆ ಇಷ್ಟ'ವೆಂದೆ. 'ಯಾವ ಆಟ ಇಷ್ಟ?' ಎಂದು ನಸುನಗುತ್ತಾ ಕೇಳಿದ್ದರು. ಮಂಜರಿಯೊಡನೆ ಬೊಂಬೆಯಾಟ, ಅಮ್ಮ ಅಪ್ಪ ಆಡುತ್ತಿದ್ದೆನಲ್ಲಾ... ಅದೇ ನೆನಪಾಯ್ತು. 'ಅಪ್ಪ ಅಮ್ಮ ಆಟ, ಗೊಂಬೆಯಾಟ ಇಷ್ಟ' ಎಂದೆ. ಅಷ್ಟಕ್ಕೇ ನಗುತ್ತಾ ಋಷಿಗಳು, 'ಮಗೂ ಕುಂತೀ, ನೀನು ಹೇಳಿಕೊಟ್ಟ ಪೂಜೆಗಳನ್ನು ಶ್ರದ್ಧೆಯಿಂದ ಮಾಡುತ್ತೀಯ. ನಿನಗೆ ನಿನ್ನಿಷ್ಟದ ದೈವ ಒಲಿದು, ಆಡಿಸಿಕೊಂಡಿರಲು ಜೀವಂತ ಮಕ್ಕಳನ್ನು ಕೊಡಲಿ' ಎಂದು ಹೇಳಿ ಮಂತ್ರೋಪದೇಶ ಮಾಡಿಬಿಟ್ಟರು.

ಅಷ್ಟು ಸಣ್ಣ ಹುಡುಗಿಗೆ ಜೀವಂತ ಬೊಂಬೆಯ ಅಗತ್ಯವೇನಿತ್ತು? ಮುಂದೆ ಪಾಂಡುವಿನೊಡನೆ ಕಳೆಯಬೇಕಾದ ನನ್ನ ಬರಡು ಬಾಳಿನ ಬಗ್ಗೆ ಮೊದಲೇ ಅವರಿಗೆ ತಿಳಿದಿತ್ತೇ? ಇರಬಹುದು, ಸಾಧಕರಲ್ಲವೇ ಅವರು. ಆದರೆ ನಾನು ಅತ್ಯಂತ ಮುಠ್ಠಾಳತನದಿಂದ ಅದನ್ನು ಉಪಯೋಗಿಸಿಕೊಳ್ಳಬಹುದೆಂದು ಅವರಿಗೆ ಏಕೆ ತಿಳಿಯಲಿಲ್ಲ? ಬಹುಶಃ ಹೆಣ್ಣಾಗಿರುವ ನಾನು ಅಂತಹ ದುಸ್ಸಾಹಸಕ್ಕೆ ಕೈ ಹಾಕುವುದಿಲ್ಲವೆಂಬ ಭರವಸೆಯೇನೋ. ಉಳಿದಂತೆ, ಎಲ್ಲಾ ನನ್ನ ಗ್ರಹಚಾರ.

ಋಷಿಗಳು ಅರಮನೆಯಿಂದ ಹೋದ ಕೆಲವು ದಿನಗಳಲ್ಲೇ ನನಗೆ ಮುನಿಗಳ ಮಂತ್ರಮಹಾತ್ಮೆಯ ಸತ್ಯಾಸತ್ಯತೆಯ ಬಗ್ಗೆ ಪರೀಕ್ಷಿಸುವ ಮನಸ್ಸಾಯ್ತು. ಆ ಒಂದು ದಿನ ಇದಕ್ಕಿದ್ದಂತೆ ಋಷಿಗಳ ವರವನ್ನು ಉಪಯೋಗಿಸಿಕೊಂಡು ಮುದ್ದಾದ ಮಗುವನ್ನು ಪಡೆಯಬೇಕು, ಅದರೊಡನೆ ಆಡುತ್ತಾ, ಮುದ್ದು ಮಾಡುತ್ತಾ, ಕಾಲಕಳೆಯಬೇಕೆಂಬ ಆಸೆ ತೀವ್ರವಾಯ್ತು. 'ಯಾರನ್ನು ನೆನೆದುಕೊಳ್ಳುತ್ತೇನೋ ಅವರಂತಹ ಮಗು!' ಋಷಿಗಳು ಹೇಳಿದ್ದು ಇದನ್ನೇ ಅಲ್ಲವೇ! ಯಾರನ್ನು ನೆನೆಯಲಿ?

ಪ್ರತೀ ಮುಂಜಾನೆ, ಸಂಜೆಗಳ ನನ್ನ ವನವಿಹಾರದ ಸಮಯದಲ್ಲಿ, ಅರಮನೆ ಉದ್ಯಾನದ ಮರಗಳೆಡೆಯಿಂದ ತೂರುತ್ತಾ, ಹರಿವ ನದಿಯ ಬಳುಕಿನಲ್ಲಿ ಪ್ರತಿಫಲಿಸುತ್ತಾ, ಹೂ ರಾಶಿಗಳ ಮೇಲೆ, ಮೋಡಗಳ ಎಡೆಯಿಂದ ಇಣುಕುತ್ತಾ ತನ್ನ ಅಗಾಧ ಸೌಂದರ್ಯ, ಶಕ್ತಿಯನ್ನು, ತೋರುತ್ತಿದ್ದ ಸೂರ್ಯನನ್ನೇ ಮೋಹಿಸುವಂತೆ ಏಕೆ ಮನಸ್ಸು ತುಡಿಯಿತೋ... ಎಲ್ಲಾ ಹಾಳು ಯೌವನದ ವಾಂಛೆ...

ಯಾವಾಗಲೂ ಅದೇ ಪ್ರಶ್ನೆ ಕಾಡುತ್ತಿತ್ತು– ಯಾರನ್ನು ನೆನಯಲಿ? ಯಾರನ್ನು ನೆನೆಯಲಿ? ಸಂಜೆಯ ಇಳಿ ಹೊತ್ತಿನಲ್ಲಿ ನನಗಾಗಿ ನಿರ್ಮಿಸಲಾಗಿದ್ದ ಕೃತಕ ಕಮಲ ಸರೋವರದಲ್ಲಿ ಕಾಲು ಇಳಿಬಿಟ್ಟು, ನನ್ನ ಮೃದು ಪಾದ ಚುಂಬಿಸಲು ಬಂದ ಹಿಂಡುಹಿಂಡು ಮೀನಿನಾಟವನ್ನು ನೋಡುತ್ತಿದ್ದವಳನ್ನು ಮತ್ತೆ ಮತ್ತೆ ಸೆಳೆದದ್ದು ರಂಗುರಂಗಾಗಿ ಪ್ರಜ್ವಲಿಸುತ್ತಿದ್ದ ಸೂರ್ಯನೇ ಅಲ್ಲವೇ! ಹೌದು ಸೂರ್ಯನೇ ಏಕಾಗಬಾರದು? ಸೂರ್ಯನಂತಹ ತೇಜಸ್ವಿಯಾಗಿರುವ ಜೀವಂತಬೊಂಬೆ ಆಡಿಕೊಂಡಿರಲು ಇದ್ದರೆ? ಓ... ತಡಮಾಡದೇ ಮಂತ್ರಪಠಿಸಿದೆ. ತದೇಕವಾಗಿ ಸೂರ್ಯನನ್ನೇ ನೋಡುತ್ತಿದ್ದೆ. ಇನ್ನೇನು ಪಡುವಣದಿ ಮುಳುಗಬೇಕಾದವ ಬಂದೇಬಿಟ್ಟ! ನನ್ನ ಬಾಳು ಬೆಳಗಿತಾ... ಮುಳುಗಿತಾ... ಆಗ ತಿಳಿಯಲಿಲ್ಲ.

ಯಾರಿಗೂ ಗೊತ್ತಾಗದಂತೆ ಗುಟ್ಟಾಗಿ ಕರೆದದ್ದಲ್ಲವೇ ನಾನು. ಹೊತ್ತೂ ಇಳಿದಿತ್ತಲ್ಲ. ಸೂರ್ಯನಿಗೂ ಯಾವ ಅವಸರವಿರಲಿಲ್ಲ. ನಾನು ಋಷಿಗಳ ಮಂತ್ರ ಹೇಳಿದ ಕೂಡಲೇ ಮಂತ್ರಮುಗ್ಧನಾಗಿ ಬಂದು ನನ್ನೊಡನೆ ಸರಸವಾಗಿ ಮಾತನಾಡಿದ. ಆದರೆ ನನಗೆ ಕೊಡಲು ಅವನ ಬಳಿ ಮಗುವಿರಲಿಲ್ಲ! ಕೇಳೋಣವೆಂದುಕೊಂಡರೆ, ಬಂದಕೂಡಲೇ ಮಗುವನ್ನು ಕೇಳುತ್ತಾಳೆಂದು ಕೋಪಗೊಂಡು ಆಮೇಲೆ ಕೊಡದೇ ಇದ್ದರೆ ಎಂದು ಭಯವಾಗಿ, ಸುಮ್ಮನಾದೆ. ಗಂಡಸರಲ್ಲಿ ಏನಾದರು ಕೇಳುವುದಿದ್ದರೆ ಅವರ ಮನಸ್ಸು ನೋಡಿಕೊಂಡು ಕೇಳಬೇಕಂತೆ. ಹೀಗೆ ಪಾಠವಾಗಿತ್ತಲ್ಲ ಎಳವೆಯಿಂದ. ಆ ಇರುಳಿಡೀ ಮಾತು ಮಾತು ಮಾತು. ಎಷ್ಟು ದೇಶ ಕಂಡು ಬಂದಿದ್ದವನು ಅವನು! ನನಗೋ ಬೆರಗೆಂದರೆ ಬೆರಗು! ಅದುವರೆಗೂ ಕಂಡಿರದ, ಕಾಣಲಾರದ, ಸೊಬಗನ್ನೆಲ್ಲಾ ಬಣ್ಣಿಸಿಟ್ಟ. ಇರುಳು ಸರಿದಿತ್ತು. ಚಂದಿರ ತನ್ನ ಕರ್ತವ್ಯದ ಹೊರೆಯನ್ನು ಇವನ ಹೆಗಲಿಗೆ ಒಪ್ಪಿಸಲು ಕಾಯುತ್ತಿದ್ದ. ಇವನಿಗೂ ಜಗತ್ತನ್ನು ಬೆಳಗಬೇಕೆಂಬ ನಿಯಮವಿತ್ತಲ್ಲ. ಹೊರಡಲು ಅನುವಾದ. ಕರೆದ ಕೂಡಲೇ ಬಂದವನು ಹೀಗೆ ಹೊರಟು ನಿಂತದ್ದು ಕಂಡು ನಾನು ಗಲಿಬಿಲಿಗೊಂಡೆ. ನನ್ನೊಡನೆ ಇವನೇ ಶಾಶ್ವತ ಇರುವುದಿಲ್ಲ. ಇನ್ನಿವನು ಕೊಡುವ ಮಗು ಇರುತ್ತದೆಯೇ? ಆದರೆ ಮಗುವೆಲ್ಲಿದೆ? ಯಾವಾಗ ಕೊಡುತ್ತಾನೆ? ಬರೀ ಪ್ರಶ್ನೆಗಳೇ ನನ್ನ ಮನದ ತುಂಬಾ. ಬಾಯಿ ಮಾತ್ರ ತೆರೆಯಲಿಲ್ಲ ನಾನು.

ಮೌನಗೊಂಡವಳನ್ನು ಕಂಡು ಅವನೇ ಮೊದಲು ನುಡಿದ. 'ಏಕೆ ಯುವರಾಣಿ, ಚಿಂತಿಸುತ್ತಿರುವೆ? ಹೊತ್ತಾಗುತ್ತಿದೆ ನನಗೆ. ಮತ್ತೆ ನಾಳೆ ಸಿಗುವೆ.' ಅವನ ಪ್ರಖರ ಪ್ರಭೆಯ ಮುಂದೆ ಏನೊಂದೂ ಮಾತನಾಡಲು ತಿಳಿಯದೆ ಮಂಕಾಗಿ ಕುಳಿತ ನನ್ನನ್ನು, 'ಋಷಿಗಳ ಅನುಜ್ಞೆಯಾಗಿದೆಯಲ್ಲವೇ ಯಾವುದಕ್ಕೂ ಹೆದರಬೇಡ, ಏನೂ ಕೆಡುಕಾಗದೆಂದು' ರಮಿಸುತ್ತಾ ಅಪ್ಪಿಕೊಂಡ. ಕೊರಗು ಸರಿಯಿತು.

ಅದೆಷ್ಟೋ ದಿನಗಳವರೆಗೆ ಬರುತ್ತಲೇ ಇದ್ದ. ಹೊತ್ತು ಕಂದಿದ ಮೇಲೆ. ಬೆಳಗಿನ ಅವನ ಉರಿಯುವ ಕೆಲಸ ಮುಗಿಸಿ, ಇರುಳಲಿ ಬಂದು ನನ್ನಲ್ಲಿ ತಂಪಾಗಿ ಕರಗಿಹೋಗುತ್ತಿದ್ದ. ಹೀಗೆ ಬರಲು ಶುರು ಮಾಡಿ ಬಹುಶಃ ನಾಲ್ಕಾರು ವಾರಗಳಾಗಿರಬಹುದು. ನನಗೆ ಆತ ಬಂದು ಹೋದ ಹಾಗೆಲ್ಲಾ ಮಗುವಿನ ಬಯಕೆ. ಯಾವಾಗ ಮಗುವ ಕೊಟ್ಟಾನು ಈ ರವಿತೇಜ ಎಂದು. ಅದೊಂದು ದಿನ ಮುಂಜಾವಾಗುವ ಹೊತ್ತಾಗುತ್ತಿತ್ತು. ಅವನಿಗೆ ಹೊರಡುವ ಅವಸರವಿತ್ತು. ಮಲಗಿದ್ದ ನನ್ನನ್ನು ತದೇಕಚಿತ್ತದಿಂದ ನೋಡುತ್ತಿದ್ದ. ನಾನು ಅರೆ ಎಚ್ಚರದಲ್ಲಿದ್ದೆ. ಆತ ಏಕೋ ಗಾಬರಿಗೊಂಡ, ಹೆಮ್ಮೆಯ ನಸು ನಗು. ಆಗ ಅವನ ಹಣೆಯ ಮೇಲೆ ನೆರಿಗೆ ಮೂಡಿದ್ದು ನನಗೆ ಈಗಲೂ ಸ್ಪಷ್ಟವಾಗಿ ನೆನಪಾಗುತ್ತಿದೆ. ತಟ್ಟನೆ ಎದ್ದು ಹೊರಡಲು ಅನುವಾದ. ಹೋಗುವ ಮೊದಲು ದೀರ್ಘವಾಗಿ ಚುಂಬಿಸಿ, ನಿಟ್ಟುಸಿರಿಟ್ಟು, ತಲೆ ಸವರಿದ. ಏನೋಹೇಳಬೇಕಿತ್ತೇನೋ ಅವನಿಗೆ, ಹೇಳಲಿಲ್ಲ. ಮಗುವ ಬಗ್ಗೆ ಅಂದೂ ನಾನು ಕೇಳಲಿಲ್ಲ.

ಅದೇ ಕೊನೆಯ ಭೇಟಿ. ಮತ್ತೆ ಬರಲಿಲ್ಲ. ನನಗೂ

